ಕೇಳುತ್ತಿರುವ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ. ಇವತ್ತೇ ದರ್ಖಾದ ಕೊನೆ. ಸರ್ಕಾರದ ಹಣ ಅನೇಕ ಬಾಬುಗಳ ಮೇಲೆ ಬಿಡುಗಡೆಯಾಗುವುದು ಮಾರ್ಚಿ ತಿಂಗಳ ಈ ೪-೫ ದಿವಸಗಳಲ್ಲಿ ಆಗುತ್ತದೆ.

ಶ್ರೀ ವಿ. ಲಕ್ಷ್ಮೀಸಾಗರ್.—ಆದು ಲ್ಯಾಪ್ಸ್ ಆಗುವುದಿಲ್ಲ. ಬಹುಬೇಗ ಹಣವನ್ನು ಬಿಡುಗಡೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಮಾನ್ಯ ಸದಸ್ಯರಿಗೆ ಆಶ್ವಾಸನೆಯನ್ನು ಕೊಡುತ್ತಿದ್ದೇನೆ.

ರಾಜ್ಯದ ಕಾರ್ಮಿಕ ಸಂಘಗಳಿಗೆ ಗುಪ್ತ ಮತದಾನ ರೀತಿಯಲ್ಲಿ ಮಾನ್ಯತೆ ಮಾಡುವ ಬಗ್ಗೆ

೨೪೬. ಶ್ರೀ ಎಸ್. ಸೂರ್ಯನಾರಾಯಣರಾವ್ (ವರ್ತೂರು).—ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಕರ್ನಾಟಕ ರಾಜ್ಯದಲ್ಲಿ ಕಾರ್ಮಿಕ ಸಂಘಗಳಿಗೆ ಗುಪ್ತ ಮತದಾನ ರೀತಿಯಲ್ಲಿ ಮಾನ್ಯತೆ ನೀಡುವ ಬಗ್ಗೆ ಸರ್ಕಾರದಪರ ನೀತಿಯೇನು ?

ಶ್ರೀ ಅಜೀಜ್ ಸೇಠ್ (ಮಾನ್ಯ ಕಾರ್ಮಿಕ ಮಂತ್ರಿಗಳು).—

(ಅ) ಕಾರ್ಮಿಕ ಕಾನೂನುಗಳ ಅಡಿಯಲ್ಲಿ ಈ ಕಾರ್ಮಿಕ ಸಂಘಗಳಿಗೆ ಮಾನ್ಯತೆ ನೀಡುವ ಬಗ್ಗೆ ಯಾವ ವಿಧಿ ನಿಯಮಗಳು ಇಲ್ಲ. ಆದರೆ ಹಿಂದೆ ಒಪ್ಪಿಕೊಂಡ ಒಂದು ನೀತಿ ಸಂಹಿತೆಯ ಪ್ರಕಾರ (ಕೋಡ್ ಆಫ್ ಡಿಸಿಪ್ಲಿನ್) ಕಾರ್ಮಿಕ ಸಂಘಗಳನ್ನು ಮಾನ್ಯತೆ ಮಾಡುವ ಪ್ರಶ್ನೆ ಬಂದಾಗ ಕಾರ್ಮಿಕ ಸಂಘಗಳ ಬಲಾಬಲಗಳನ್ನು ನೇರವಾಗಿ ಪರಿಶೀಲನೆ ಮಾಡುವ ಪದ್ಧತಿಯಿಂದ ನಿರ್ಧರಿಸಿದ ವಿಧಾನ ಸೂಚಿಸಲಾಗಿದೆ.

ಗುಪ್ತ ಮತದಾನದ ರೀತಿಯಲ್ಲಿ ಮಾನ್ಯತೆ ಪ್ರಶ್ನೆಗಳು ನಿರ್ಧರಿಸಬೇಕಾದರೆ ಎರಡೂ ಕಾರ್ಮಿಕ ಸಂಘಗಳು ಒಪ್ಪಿಕೊಂಡು ಒಂದು ಒಪ್ಪಂದಕ್ಕೆ ಸಹಿ ಮಾಡಿ ಕಾರ್ಮಿಕ ಇಲಾಖೆಯನ್ನು ಸಂಪರ್ಕಿಸಿದರೆ ಗುಪ್ತ ಮತದಾನ ಪದ್ಧತಿಯನ್ನು ಅನುಸರಿಸಬಹುದು. ಕೆಲವು ಸಂಘಗಳ ವಿಷಯದಲ್ಲಿ ಈ ರೀತಿಯ ಒಪ್ಪಂದದ ನಂತರ ಗುಪ್ತ ಮತದಾನ ನಡೆಸಲಾಗಿದೆ. ಈ ಬಗ್ಗೆ ಕಾನೂನಿನಲ್ಲಿ ನಿಯಮಗಳನ್ನು ಮಾಡುವುದಾದರೆ ಎಲ್ಲಾ ಸಂಘಗಳ ಮಾನ್ಯತೆಯ ಪ್ರಶ್ನೆಗಳು ಗುಪ್ತ ಮತದಾನ ಪದ್ಧತಿಯಲ್ಲಿ ನಿರ್ಧರಿಸುವುದನ್ನು ಜಾರಿಗೆ ತರಬಹುದು. ಈ ವಿಷಯದಲ್ಲಿ ಇನ್ನೂ ಹೆಚ್ಚು ಪರಿಶೀಲನೆ ಆಗಬೇಕು.

ಶ್ರೀ ಎಸ್. ಸೂರ್ಯನಾರಾಯಣರಾವ್.—ಈ ಗುಪ್ತ ಮತದಾನದ ಬಗ್ಗೆ ಕಾರ್ಮಿಕರಿಗೆ ಅವರಿಗೆ ಬೇಕಾದಂತಹ ಮುಖಂಡತ್ವವನ್ನು ಚುನಾಯಿಸತಕ್ಕಂತಹ ಹಕ್ಕನ್ನು ಕೊಡದೇ ಇರುವುದರಿಂದ ಕೈಗಾರಿಕೆಯಲ್ಲಿ ಅಶಾಂತಿ, ಅನೇಕ ಘರ್ಷಣೆಗೆ ಸಹ ಕಾರಣವಾಗಿರುವುದು ಇವತ್ತು ಸರ್ಕಾರದ ಗಮನಕ್ಕೆ ಬಂದಿದೆಯೇ? ನಾವು ಈ ಸರ್ಕಾರ ಪ್ರಜಾಪ್ರಭುತ್ವದ ಮೌಲ್ಯವನ್ನು ಎತ್ತಿ ಹಿಡಿಯುತ್ತೇವೆಂದು ಹೇಳುತ್ತಿರುವಾಗ, ಕಾರ್ಮಿಕರು ಪ್ರಜಾಪ್ರಭುತ್ವದ ಮೌಲ್ಯಕ್ಕಾಗಿ ಹೋರಾಟ ಮಾಡತಕ್ಕಂತಹದ್ದು ದುರ್ದೈವವಾಗಿ ಅವರಿಗೆ ಬೇಕಾಗಿರುವಂತಹ ಈ ಒಂದು ಹಕ್ಕನ್ನು ಕೊಡುವುದಕ್ಕೆ ಸರ್ಕಾರಕ್ಕೆ ಇರತಕ್ಕಂತಹ ಅಡೆತಡೆ ಏನು? ದೃಢೀಕರಣವಾಗಿ ೨ ಸಂಘಗಳಿದ್ದರೆ ರೆಕಗ್ನಿಷನ್. ಒಂದೇ ಸಂಘದಲ್ಲಿ ಮ್ಯಾನೇಜ್‌ಮೆಂಟ್ ಕೆಲವು ಜನಗಳನ್ನು ಗುಂಪಮಾಡಿ ಈ ಒಂದು ರೆಕಗ್ನಿಷನ್‌ನ್ನು ತನ್ನೆಡೆಗೆ ತಿರುಗಿಸಿಕೊಂಡಿದ್ದಾರೆ. ಇದು ಕ್ಷೇಮವೇ? ಬೈಕೋ, ಬಿ.ಟಿ.ಸಿ. ಬಿಯರ್ ಜಾವಾ ತರಹ ಬೇರೆ ಬೇರೆ ಇತ್ಯರ್ಥ ಮಾಡುವುದಕ್ಕೆ ಸುಕೆ ಹಿಂದುಮುಂದು ನೋಡುತ್ತಿದ್ದೀರಿ ? ಇದರಿಂದ ಫ್ಯಾಕ್ಟರಿಗಳಲ್ಲಿ ದುಷ್ಕರ್ಮ ನಡೆಯುತ್ತದೆ. ಇದರ ಬಗ್ಗೆ ಸರ್ಕಾರ ಒಂದು ನಿಲುವನ್ನು ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಶ್ರೀ ಅಜೀಜ್ ಸೇಠ್.— ಈ ವಿಷಯ ಸರ್ಕಾರದ ಗಮನಕ್ಕೆ ಬಂದಿದೆ. ಒಂದೇ ಯೂನಿಯನ್‌ನಲ್ಲಿ ಇಬ್ಬರು ಮೆಂಬರ್ಸ್ ಇರುವುದರಿಂದ ಮತ್ತು Mangementನಲ್ಲಿ ಆಫೀಸರ್ಸ್ ಇರುವುದರಿಂದ ಅಲ್ಲಿ ಬಹಳ ತೊಂದರೆಯಾಗುತ್ತದೆ. There is no law or yardstick to determine as to which union is to be recognised. They have to go to a Court of law and get it determined. Therefore, taking into consideration the situation prevailing there and also what is happening there, I am feeling very strongly to convey a meeting of all the senior labour

leaders and decide as to how we would act and see how we can think of bringing certain legislation in this regard.

ಶ್ರೀ ಎಂ. ಎಸ್. ಕೃಷ್ಣನ್.— ಸ್ವಾಮಿ ಈ ವಿಷಯದ ಬಗ್ಗೆ ಮಾನ್ಯ ಕಾರ್ಮಿಕ ಮಂತ್ರಿಗಳಿಗೆ ಕಳಕಳಿ ಇದೆಯೆಂದು ಗೊತ್ತಾಗಿದೆ. ಆದರೆ ಆಂಧ್ರ ಪ್ರದೇಶದಲ್ಲಿ ಇದಕ್ಕೆ ಸಂಬಂಧಪಟ್ಟಂತೆ ಒಂದು ಕಾನೂನು ಮಾಡಿದ್ದಾರೆ. ಅದು ಸರ್ಕಾರದ ಗಮನಕ್ಕೆ ಬಂದಿದೆಯೇ? ಆಂಧ್ರಪ್ರದೇಶದಲ್ಲಿ ತಂದಿರುವಂಥ ಕಾನೂನನ್ನು ನಮ್ಮ ಕರ್ನಾಟಕ ರಾಜ್ಯದಲ್ಲಿಯೂ ಕೂಡ ತರುವುದಕ್ಕೆ ಪ್ರಯತ್ನ ಮಾಡುತ್ತೀರಾ?.

SRI AZEEZ SAIT.—It is a good suggestion. That is why I have said that I would like to meet all the senior labour leaders represen ting central organisation of the State Union, Department of labour and law department so that we can discuss these things and evolve certain measures to see that this sort of interventions are avoided. The hon. member Sri M. S. Krishnan is a senior labour leader who knows that a particular number of workers can conduct elections themselves, but if it is beyond that particular number then only they will have to approach the Labour Commissioner for conducting elections. Taking into consideration the present conditions infights, and competitions, I think the formation of Election Commission is necessary for Trade Unions as we have the Election Commission for political parties.

SRI M. S. KRISHNAN.—In Andhra Pradesh there is a legislation which says that if there is one union how they should conduct and function: if there are two unions how they should conduct and function. Secret Ballot is also there. We shall discuss about it, but are you prepared to bring out such a legislation here also immediately since it comes under the concurrent list.

SRI AZEEZ SAIT.—I welcome your suggestions. Let me find out what are the laws prevailing in Andhra Pradesh and elsewhere to evolve peaceful atmosphere in trade Unions. I am definitely for it. I think it is better to gather all those materials and information before I convevene a meeting.

ಶ್ರೀ ಪಿ. ರಾಂದೇವ್.—ಮಾನ್ಯಅಧ್ಯಕ್ಷರೇ ಈಗಿನ ಸರ್ಕಾರ ಮಾಲೀಕರು ಮತ್ತು ಕಾರ್ಮಿಕರು ಒಳ್ಳೆಯ ರೀತಿಯಲ್ಲಿ ಇರಬೇಕೆಂದು ಹೇಳಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಸಭೆಯನ್ನು ಕರೆದಿದ್ದರು. ಆ ಸಭೆಯಲ್ಲಿ ಮಾನ್ಯಮುಖ್ಯಮಂತ್ರಿಗಳು ಕಾರ್ಮಿಕರ ಹಾಗೂ ಮಾಲೀಕರ ಕುಂದುಕೊರತೆಗಳನ್ನು ವಿಚಾರಿಸಿಕೊಂಡು ಇನ್ನು ಮುಂದೆ ಪ್ರತಿ ತಿಂಗಳು ನಾವು ಸಭೆಯನ್ನು ಕರೆದು ನಿಮ್ಮ ಕುಂದುಕೊರತೆಗಳನ್ನು ಸರ್ಕಾರ ವಿಚಾರಿಸುತ್ತದೆ ಎಂದು ಹೇಳಿದ್ದೀರಿ. ಆದ್ದರಿಂದ ಮಾನ್ಯ ಸದಸ್ಯರಾದಂಥ ಶ್ರೀನಿವಾಸ್ ಎಂ. ಎಸ್. ಕೃಷ್ಣನ್‌ರವರು ಹೇಳಿದಂತೆ ಒಂದು ಕಾನೂನನ್ನು ಮಾಡುವುದಕ್ಕೆ ಆಗದಿದ್ದರೆ ಅದರ ಬದಲು ಒಂದು ಸಾಗ್ರೀವಾಜ್ಞೆಯನ್ನು ಆದರೂ ಹೊರಡಿಸುತ್ತೀರಾ ?.

ಶ್ರೀ ಆಜೀಜ್ ಸೇತ್.—ಸ್ವಾಮಿ ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ನಾವು ತಿಂಗಳಿಗೆ ಒಂದು ಭಾರಿ ಮೀಟಿಂಗ್ ಮಾಡುತ್ತಿಲ್ಲ ಕಾರ್ಮಿಕರಿಗೂ ಮತ್ತು ಮಾಲೀಕರಿಗೂ ಮನಸ್ತಾಪ ಬಂದಾಗ ಅವರನ್ನು ಕರೆಸಿ ಮಾತನಾಡಿದ್ದೇವೆ. ಅದಕ್ಕೆ ಯಾವುದೇ ಸಮಯವನ್ನು ನಿಗದಿ ಮಾಡದೆ ರಾತ್ರಿ ಆಂದರೆ ರಾತ್ರಿ ಬೆಳಗ್ಗೆ ಎಂದರೆ ಬೆಳಗ್ಗೆ ಮಧ್ಯಾಹ್ನವೆಂದರೆ ಮಧ್ಯಾಹ್ನ ಅವರನ್ನು ಕರೆಸಿ ನನ್ನ ಕೊಠಡಿಯಲ್ಲಿ ಮಾತನಾಡಿದ್ದೇನೆ. ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಮೊಟ್ಟ ಮೊದಲನೆಯದಾಗಿ ಕೆ.ಇ.ಬಿ. ಕಾರ್ಮಿಕರ ಸಂಘದ ಕಂದಾಯಕೊರತೆಯನ್ನು ವಿಚಾರ ಮಾಡಿ ಪರಿಹಾರ ಮಾಡಿದ್ದೇವೆ. In one of the biggest unions viz. K.E.B. employees union where a dispute was pending since 1979 it has been settled within no time. Thus, labour leaders and others concerned will be meeting and discussing various such matters often and often. I would like to make it clear that wherever injustice or discrimination is done to workers the Government will always come forward to their rescue. we will see that labourers get their right and peace prevails in industries. But, when once the matter is referred to the labour court inordinate dealay occurs in those courts for which we are helpless. As far as possible we will try to set it right, I would also like to bring to the notice of the House that there is a growing tendency amoung trade union leaders to straightly approach the higher authorities viz. Labour Commissioner and the Labour Minister without discussing with the officers like Labour officers and Assistant labour Commissioner, where they could settle some of the issues. This tendency has to be avoided. Therefore I would say that there are so many things which we can discuss across the table over a cup of tea.

ಶ್ರೀ ಎಂ.ಎಸ್. ಕೃಷ್ಣನ್ —ಸ್ವಾಮಿ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಅಧಿಕಾರಿಗಳು ಬೇಜವಾಬ್ದಾರಿಯಿಂದ ವರ್ತನೆ ಮಾಡುತ್ತಾರೆ, ಅಧಿಕಾರಿಗಳಿಂದ ಈ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಆಗುವುದಿಲ್ಲವೆಂದು ಹೇಳಿ ಅವರು ಲೇಬರ್ ಕಮಿಷನರವರೇ ತೀರ್ಮಾನ ಮಾಡಬೇಕೆಂದು ಹೇಳುತ್ತಾರೆ. ಅಲ್ಲಿ ಅಧಿಕಾರಿಗಳೆಲ್ಲಾ ಭ್ರಷ್ಟಾಚಾರವನ್ನು ಮಾಡುತ್ತಿದ್ದಾರೆ. ಆಂಧ್ರಪ್ರದೇಶದಲ್ಲಿ ಹಂದಿರುವಂಥ ಕಾನೂನು ಇಲ್ಲಿ ತಂದರೆ ಸ್ವಲ್ಪ ಸಹಾಯವಾಗಬಹುದೆಂದು ನನ್ನ ಅಭಿಪ್ರಾಯ. ಮತ್ತು ನಾವು ಗುಪ್ತ ಮತದಾನ ಮಾಡುವುದಕ್ಕಾಗಿ ಒಳ್ಳೆಯ ವ್ಯವಸ್ಥೆಯನ್ನು ಮಾಡಿದ್ದೀವಿ. ಕಾರ್ಮಿಕರು ಲೇಬರ್ ಕಮಿಷನರ್‌ರವರು ಒಳ್ಳೆಯ ನ್ಯಾಯ ದೊರಕಿಸಿಕೊಡುತ್ತಾರೆಂಬ ನಂಬಿಕೆಯಿಂದ ಕೇಳುತ್ತಾರೆ. ಅವರು ಲೇಬರ್ ಕೋರ್ಟಿಗೆ ಹೋಗಿ ಎಂದು ಹೇಳುವುದರಲ್ಲಿ ಅರ್ಥವಿಲ್ಲ ಅಲ್ಲಿನ ಅಧಿಕಾರಿಗಳು ಯಾವ ರೀತಿಯಲ್ಲಿ ಭ್ರಷ್ಟಾಚಾರ ಮಾಡುತ್ತಾರೆಂದು ತಮಗೆಲ್ಲಾ ಗೊತ್ತಿದೆ. ತಾವು ಕಾರ್ಮಿಕರಲ್ಲಿ ರೀತಿಯ ಆಶಾತಂತುವನ್ನುಂಟು ಮಾಡಿದ್ದೀರಿ. ಇದರಿಂದ ಕಾರ್ಮಿಕರಲ್ಲಿ ಮತ್ತು ಮಾಲೀಕರಲ್ಲಿ ಯಾವ ರೀತಿ ಸುಮಧುರ ಬಾಂಧವ್ಯಯುಂಟಾಗುತ್ತದೆ

ಶ್ರೀ ಆಜೀಜ್‌ಸೇತ್.—ಸ್ವಾಮಿ ನಾನು ಹೇಳುವುದನ್ನು ತಾವು ಸ್ವಲ್ಪ ದಯವಿಟ್ಟು ಕೇಳಬೇಕು. ನಾನು ಪ್ರಾರಂಭದಲ್ಲಿಯೇ ತಮಗೆ ಉತ್ತರ ಕೊಟ್ಟಿದ್ದೇನೆ. ಈಗ ನಾನು ಮಾನ್ಯ ಸದಸ್ಯರಾದಂಥ ರಾಮೇಶ್ವರಪರಿಗೆ ಉತ್ತರ ಕೊಡುತ್ತಿದ್ದೇನೆ. ನಾನು ಹೇಳಿದ್ದು ಏನೆಂದರೆ ನಾನು ಕಾರ್ಮಿಕರನ್ನು ತಿಂಗಳಿಗೆ ಒಂದು ಸಾರಿ ಕರೆಯುತ್ತಿಲ್ಲ. ಯಾವಾಗ ಅವರಲ್ಲಿ ಸಮಸ್ಯೆಯುಂಟಾಗುತ್ತದೆಯೋ ಆಗಲೇ ಅವರನ್ನು ಕರೆದು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆಂದು ಹೇಳಿದ್ದೇನೆ. ನನ್ನ ಕೊಠಡಿಯಲ್ಲಿಯೇ ಕುಳಿತುಕೊಂಡು ನಾನು ಎಷ್ಟೋ ಸಾರಿ ಸಮಸ್ಯೆಗಳನ್ನು ಬಗೆಹರಿಸಿದ್ದೇನೆ. ಇಪತ್ತು ಆನೇಕರು ಅಸಿಸ್ಟೆಂಟ್ ಲೇಬರ್ ಕಮಿಷನರ್‌ರವರ ಹತ್ತಿರ ಹೋಗದೆ ನೇರವಾಗಿ ಬೆಂಗಳೂರಿಗೆ

ಬಂದು ಲೇಬರ್ ಮಿನಿಸ್ಟರ್ ಹತ್ತಿರ ಬರುತ್ತಾರೆ. ಆದ್ದರಿಂದ ನಾನು ಮಾನ್ಯ ಸದಸ್ಯರಿಗೆ ಈ ಮಾತನ್ನು ಹೇಳುತ್ತಿದ್ದೆ. ಆದರೆ ಮಾನ್ಯ ಕಾರ್ಮಿಕ ಮುಖಂಡರಿಗೆ ಇಷ್ಟು ಕೋಪ ಬಂದರೆ ಹೇಗೆ? What I have said is not an insinuation. There is no charge. I am telling what is happening to this House. I have said that the labour leaders are happy and that they are most co-operative.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ಮುಖ್ಯಮಂತ್ರಿಗಳು ತಿಂಗಳಿಗೆ ಒಂದು ಸಲ ಕಾರ್ಮಿಕರ ಮುಂಖಂಡರನ್ನು ಕರೆಸಿ ಸಮಸ್ಯೆಗಳು ಉದ್ಭವ ಆಗುವ ಮುಂಚೆಯೇ ಚರ್ಚೆ ಮಾಡುವ ಅವಕಾಶ ಕಲ್ಪಿಸುತ್ತೇವೆ ಎಂದು ಹೇಳಿದ್ದರು. ಮಾನ್ಯ ಅಟೀಜ್‌ಸೇಠ್‌ರವರು ಈ ವಿಚಾರವನ್ನು ತಿಳಿದುಕೊಳ್ಳಲಿಲ್ಲ. ಆಗ ಅವರು ಕಾರ್ಮಿಕ ಮಂತ್ರಿಯಾಗಿರಲಿಲ್ಲ. ಐ.ಟಿ.ಸಿ. "ಪಂತ್ತು ಮೈಕೊ ಕಾರ್ಖಾನೆಗಳಲ್ಲಿ ಕಾರ್ಮಿಕ ಸಂಘಗಳಿಗೆ ಮಾನ್ಯತೆ ಆಗಿಲ್ಲ. ಸರ್ಕಾರದವರು ಹಾರಿಕೆ ಉತ್ತರ ಕೊಟ್ಟು ಕೋರ್ಟಿಗೆ ಹೋಗಿ ಎಂದರೆ ಏನರ್ಥ? ಇದನ್ನು ಪತ್ರಿಕೆಗಳಲ್ಲಿ ಓದಿದರೆ ಕಾರ್ಮಿಕರು ಛೇರಾಪೊ ಮಾಡುತ್ತಾರೆ.

ಶ್ರೀ ಪಿ. ರಾಮದೇವ್.—ನಾನು ತಿಂಗಳಿಗೊಮ್ಮೆ ಕಾರ್ಮಿಕರ ಮುಂಖಂಡರನ್ನು ಭೇಟಿ ಮಾಡಲು ಸಾಧ್ಯವಾಗುವುದಿಲ್ಲ. ಮೂರು ತಿಂಗಳಿಗೊಮ್ಮೆ ಎಲ್ಲಾ ಕಾರ್ಮಿಕ ನಾಯಕರು ಮತ್ತು ಕಾರ್ಮಿಕ ಸಚಿವರೊಡನೆ ಪೂತನಾಡುವ ಆಸೆ ನನಗೆ ಇದೆ. ಆದರೆ ಈ ಸಭೆಯಲ್ಲಿ ವೈಯಕ್ತಿಕ ಸಮಸ್ಯೆಗಳನ್ನು ಚರ್ಚೆ ಮಾಡುವುದು ಇರಬಾರದು ಎಂದು ಮುಖ್ಯಮಂತ್ರಿಗಳು ಹೇಳಿದ್ದರು. ಮುಂಖ್ಯಮಂತ್ರಿಗಳು ಸೂಚಿಸಿದ ಈ ಪದ್ಧತಿಯನ್ನು ಜಾರಿಗೆ ತನ್ನಿ.

SRI AZEEZ SAIT.—My hon. friend sri Suryanarayana Rao has again raised the question of MICO and ITC. In ITC there is one union and two office bearers. Both of them agree that I cannot do anything. In MICO there is a case in high Court. Until that is decided I cannot do anything. There is no question of workers gheroeing me. I have not said anything. I have been trying my best According to law whatever could be done, we will do it whithout loss of time. My hon. friend Mr. Rao has suggested holding of meeting with labour leaders which I do not hesitate to call once in 3 months so that we can bring about understanding.

ಶ್ರೀ ಎಸ್ ಸೂರ್ಯನಾರಾಯಣ ರಾವ್.—ಮಾನ್ಯ ಕಾರ್ಮಿಕ ಸಚಿವರು ಸರಿಯಾಗಿ ಉತ್ತರ ಕೊಡುತ್ತಿಲ್ಲ. ಮೈಕೋದಲ್ಲಿನ ಚುನಾವಣೆ ವಿಷಯವಾಗಿ ಕೋರ್ಟಿನಲ್ಲಿ ಯಾವ ತಡೆಯಾಜ್ಞೆಯೂ ಇಲ್ಲ.

ಶ್ರೀ ಅಜೀಜ್ ಸೇಠ್.—ಹೈಕೋರ್ಟ್ ಜಡ್ಜ್‌ಮೆಂಟಿನ ಪ್ರತಿಯನ್ನು ಸೂರ್ಯನಾರಾಯಣ ರಾವ್ ಅವರು ಇದುವರೆಗೂ ನನಗೆ ಕೊಟ್ಟಿಲ್ಲ. ಅವರ ಬಾಯಿಪೂತಿನ ಆಧಾರದಲ್ಲೇ ಯಾವುದಾದರೂ ಕ್ರಮ ತೆಗೆದುಕೊಳ್ಳಲು ಸಾಧ್ಯವೇ ? You have said that the case in the Court was decided in your favour. You please get that judgement copy.

ಶ್ರೀ ಎಸ್. ಸೂರ್ಯನಾರಾಯಣರಾವ್.—ನಾವು ಕೊಡದೇ ಇದ್ದರೆ ನಿಮ್ಮ ಇಲಾಖೆಯಿಂದ ತರಿಸಿಕೊಳ್ಳಬಹುದಾಗಿತ್ತು. ಅವರು ಇದನ್ನು ಪರೀಕ್ಷೆ ಮಾಡಿಲ್ಲ. ಕಾನೂನು ಇಲಾಖೆಯಿಂದ ಇದು ಸರಿಯೇ ತಪ್ಪೇ ಎಂದು ವಿಚಾರಣೆ ಮಾಡಿಸಿ.

SRI AZEEZ SAIT.—Mr. Suryanarayana Rao, this is a case in which Mr. M. S. Krishnan and other parties are involved. In no way Government is a pleader in that case. I am unable to get the judgement copy. If Government is a party in the case, I would have got the judgment copy. He said that he would be giving the judgement copy.